## ಮಂಗಳೂರು ಬೋಂಡ

ಮೂಲತಃ ಮಂಗಳೂರಿನವನಾದ ನಾನು ಮೂರು ದಶಕಗಳ ಹಿಂದೆ ಉದ್ಯೋಗ ನಿಮಿತ್ತ ಬೆಂಗಳೂರಿಗೆ ಆಗಮಿಸಿದ್ದೆ. ನನ್ನ ಸಹೋದ್ಯೋಗಿಯೊಬ್ಬರಿಗೆ ಆಹಾರದಲ್ಲಿ ವ್ಯತ್ಯಾಸವಾಗಿ ಹೊಟ್ಟೆ ಕೆಟ್ಟಿತ್ತು. 'ಇವತ್ತು ಮನೆಗೆ ಹೋಗುತ್ತಾ ದಾರಿಯಲ್ಲಿ ಒಂದು ಬೊಂಡ ಸೇವಿಸಿಬಿಡು. ಎಲ್ಲಾ ಸರಿಯಾಗುತ್ತದೆ' ಎಂದು ನಾನು ಸುಲಭೋಪಾಯ ತಿಳಿಸಿದೆ. ಮರುದಿನ ಆತ ಕೆಲಸಕ್ಕೆ ಹಾಜರಾಗಲಿಲ್ಲ. ಏನಾಯಿತೆಂದು ಫೋನಾಯಿಸಿದೆ. 'ನಿನ್ನಿಂದಾಗಿ ನನ್ನ ಹೊಟ್ಟೆ ಮತ್ತಷ್ಟು ಕೆಟ್ಟು ಹೋಗಿದೆ. ನೀನು ಹೇಳಿದೆ ಅಂತ ದಾರಿಯಲ್ಲಿ ಬಿಸಿ ಬಿಸಿ ಬೋಂಡ ತಿಂದೆ. ನೋವು ಜಾಸ್ತಿಯಾಯಿತು' ಎಂದ. ಮಂಗಳೂರಿನ ಆಡುಭಾಷೆಯಲ್ಲಿ ಎಳನೀರಿಗೆ 'ಬೊಂಡ' ಎನ್ನುತ್ತಾರೆ. ಆದರೆ, ಆತ ತಿಂದ ಬೆಂಗಳೂರಿನ 'ಬೋಂಡ' ಅನಾಹುತ ಮಾಡಿತ್ತು!

**ರಮಣ್ ಶೆಟ್ಟಿ ರೆಂಜಾಳ್**





ಕಲೆ: ಗಣೇಶ ಆಚಾರ್ಯ

## ಕೊರೊನಾ ಎಫೆಕ್ಟ್

ಪರಿಚಿತ ಕುಟುಂಬದ ಬಾಲಕನೊಬ್ಬ ಹಲವು ತಿಂಗಳುಗಳ ನಂತರ ಭೇಟಿಯಾದ. ತಕ್ಷಣಕ್ಕೆ ಆತನ ಗುರುತೇ ಸಿಗಲಿಲ್ಲ. ಏಕೆಂದರೆ ಈ ಹಿಂದೆ 'ಗೋಧಿ ಬಣ್ಣ, ಸಾಧಾರಣ ಮೈಕಟ್ಟು' ಹೊಂದಿದ್ದವನು ಈಗ ಏಕಾಏಕಿ 'ಶ್ವೇತ ವರ್ಣ, ಅಸಾಧಾರಣ ಮೈಕಟ್ಟು' ಆಗಿ ಬದಲಾವಣೆಗೊಂಡಿದ್ದ. ಉಭಯಕುಶಲೋಪರಿಯ ನಂತರ ಕುತೂಹಲ ತಡೆಯಲಾಗದೇ, 'ಈ ದಿಢೀರ್ ಬದಲಾವಣೆಗೆ ಕಾರಣವೇನು?' ಎಂದು ಕೇಳಿದೆ. ನನ್ನ ಮಾತನ್ನು ಅರ್ಧದಲ್ಲೇ ತುಂಡರಿಸಿ ಆತ ಹೇಳಿದ, 'ಅಯ್ಯೋ ಏನಿಲ್ಲ ಅಣ್ಣಾ, ಕೊರೊನಾ ಇರೋದ್ರಿಂದ ಅಪ್ಪಾಜಿ ಅಮ್ಮ ನನ್ನನ್ನು 5–6 ತಿಂಗಳಿನಿಂದ ಮನೆ ಬಿಟ್ಟು ಹೊರಗೇ ಕಳಿಸಿಲ್ಲ. ಅಂಗಳಕ್ಕೆ ಕಾಲಿಟ್ಟು ಆರು ತಿಂಗಳಾಯ್ತು. ಬಿಸಿಲೇ ನೋಡಿಲ್ಲ, ಅದಕ್ಕೆ ಹೀಗಾಗಿದೀನಿ' ಎಂದಾಗ ಮೂರ್ಛೆ ಹೋಗುವ ಸರದಿ ನನ್ನದಾಗಿತ್ತು.

**ಮಹೇಶ್ವರ ಹುರುಕಡ್ಲಿ**